ಸಿ.ಸಿ. ಸಂಖ್ಯೆ : 6074/2025
ಪಿ.ಡಬ್ಲೂ : 01

**ದಿನಾಂಕಃ 19-08-2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ಆರೋಪಿ ಪರ ಶ್ರೀ. ಕೆ.ಎಸ್.ಎಲ್. ವಕೀಲರಿಂದಃ**

8. ನಾನು ಆರೋಪಿಗೆ ಹಣವನ್ನು ನಗದಾಗಿ ದಿನಾಂಕಃ 20-03-2022 ರಂದು ಮಾಗಡಿಯಲ್ಲಿ ನೀಡಿರುತ್ತೇನೆ. ಆ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಇದ್ದೇವು. ಆ ದಿನದಂದು ನಾನು ಆರೋಪಿಗೆ ಯಾವುದೇ ಹಣವನ್ನು ಕೊಟ್ಟಿಲ್ಲ, ಆರೋಪಿ ಆ ದಿವಸ ಶಿವಮೊಗ್ಗದ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಬಾವ ಪೋಲಿಸ್ ಇಲಾಖೆಯಲ್ಲಿರುವ ಕಾರಣದಿಂದ ಎರಡು ಭಾನುವಾರಗಳನ್ನು ಆಯ್ಕೆ ಮಾಡಿ ಆ ವಾರಗಳಲ್ಲಿ ವ್ಯವಹಾರ ನಡೆದಿದೆ ಎಂದು ಸುಳ್ಳು ದೂರುಗಳನ್ನು ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ. ದಿನಾಂಕಃ 20-02-2022 ರಂದು ಭಾನುವಾರ ಆಗಿದ್ದು, ಆ ದಿವಸ ಹಿಜಾಬ್ ಕಾರ್ಯಗಾರ ಸಂಬಂಧವಾಗಿ ಶಿವಮೊಗ್ಗದಲ್ಲಿ ಆರೋಪಿ ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಎಂದರೆ ಸರಿಯಲ್ಲ.

9. ಆರು ತಿಂಗಳ ಬಳಿಕ ನಾನು ಆರೋಪಿ ಬಳಿ ಗಂಡನ ಮೊಬೈಲಿನಿಂದ ಕರೆ ಮಾಡಿ ಹಣ ಕೇಳಿರುತ್ತೇನೆ. ವಿವಾದಿತ ಚೆಕ್ಕನ್ನು ಆರೋಪಿ ನನ್ನ ಗಂಡನಿಗೆ ನೀಡಿರುತ್ತಾರೆ. ಆ ಕಾರಣದಿಂದ ನನಗೆ ಎಲ್ಲಿ ಮತ್ತು ಯಾವಾಗ ಚೆಕ್ಕನ್ನು ನೀಡಿದರು ಎಂದು ಹೇಳಲು ಆಗುವುದಿಲ್ಲ. ಹಣದ ವ್ಯವಹಾರ ಆರೋಪಿ ನಿಮ್ಮ ಗಂಡ ನಿಮ್ಮ ಬಾವನ ನಡುವೆ ಇತ್ತು ಎಂದರೆ ಸಾಕ್ಷಿ ನನ್ನ ಗಂಡ, ಆರೋಪಿ ಮತ್ತು ನನ್ನ ನಡುವೆ ಮಾತ್ರ ಇತ್ತು ಎಂದು ನುಡಿದಿರುತ್ತಾರೆ. ನಿಮ್ಮ ಗಂಡ ಹಣವನ್ನು ಬಾವನ ಕೈಗೆ ಕೊಟ್ಟು ಬಾವನ ಕಡೆಯಿಂದ ಆರೋಪಿಗೆ ಹಣವನ್ನು ಜಮೆ ಮಾಡಿಸಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ವಿವಾದಿತ ಚೆಕ್ಕನ್ನು ನೀಡಿದಾಗ ನಾರಾಯಣಪ್ಪನವರ ಮಗ ಮುತ್ತುರಾಜು ರವರು ನನ್ನ ಗಂಡನೊಂದಿಗೆ ಇದ್ದರಾ ಇಲ್ಲವಾ ಎಂಬುದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿ ವಿವಾದಿತ ಚೆಕ್ಕನ್ನು ನನ್ನ ಕೈಗೆ ನೀಡಿಲ್ಲ ಮತ್ತು ಅದನ್ನು ಬ್ಯಾಂಕಿಗೆ ಹಾಜರು ಪಡಿಸಿಕೊಳ್ಳಿ ಎಂದು ಹೇಳಿಲ್ಲ ಎಂದರೆ ಸರಿ. ನನ್ನ ಗಂಡ ಚೆಕ್ಕನ್ನು ನನ್ನ ಬ್ಯಾಂಕಿನ ಖಾತೆಗೆ ಹಾಜರು ಪಡಿಸಿಕೋ ಎಂದು ಹೇಳಿದ ಕಾರಣದಿಂದ ನಾನು ಹಾಜರು ಪಡಿಸಿರುತ್ತೇನೆಂದರೆ ಸರಿ.

10. ನನ್ನ ಖಾತೆಯಿಂದ ಆರೋಪಿಯ ಖಾತೆಗೆ ಜಮೆ ಆಗಿರುವ ರೂ.2,25,000/- ಹಣ ನನ್ನ ಗಂಡ ಕೊಟ್ಟಿರುವ ಹಣ ಅಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರದು ನಾನು ಕೂಟ್ಟಿಟ್ಟಿದ್ದ ಹಣ ಎಂದು ನುಡಿದಿರುತ್ತಾರೆ. ಆ ರೀತಿ ನನ್ನ ಬಳಿ ಕೊಟ್ಟಿಟ್ಟಿದ್ದಂತಹ ಹಣ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಖಾತೆಯ ವರದಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನ್ನ ಖಾತೆಯ ಬ್ಯಾಂಕಿನವರನ್ನು ಕೇಳಬೇಕಾಗಿರುತ್ತದೆ.

11. ನಿಪಿ-1 ರ ಚೆಕ್ಕಿನಲ್ಲಿ ನನ್ನ ಹೆಸರು ಮತ್ತು ಹಣದ ಮೊತ್ತವನ್ನು ನಮೂದು ಮಾಡಿದ್ದು ನನ್ನ ಗಂಡ. ಸಾಕ್ಷಿಯು ಮುಂದುವರೆದು ಚೆಕ್ಕನ್ನು ಆರೋಪಿಯೇ ಬರೆದುಕೊಟ್ಟಿರುತ್ತಾರೆ, ನನ್ನ ಗಂಡ ಬರೆದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಗೆ ನಿಪಿ-1 ನ್ನು ತೋರಿಸಿ ಅದರಲ್ಲಿರುವ ಸಹಿಯ ಶಾಹಿ ಮತ್ತು ಹೆಸರು ಮತ್ತು ಮೊತ್ತವನ್ನು ನಮೂದಿಸಿರುವ ಶಾಹಿಯಲ್ಲಿ ವ್ಯತ್ಯಾಸವಿರುತ್ತದೆಂದರೆ ಸರಿ. ವಿವಾದಿತ ಚೆಕ್ಕನ್ನು ಹಾಗೂ ಮತ್ತೊಂದು ಚೆಕ್ 309935 ನ್ನು ಅಮಾನ್ಯಗೊಳಿಸಿ ಒಂದೇ ದಿವಸ ನಾನು ಮತ್ತು ಮುತ್ತುರಾಜು ರವರು ಸೇರಿ ಒಂದೇ ನೋಟಿಸು ನೀಡಿರುತ್ತೇವೆಂದರೆ ಸರಿಯಲ್ಲ.

12. ಶಿವಮೊಗ್ಗದ ಆರೋಪಿಯ ಮನೆಯನ್ನು ನಾನು ನೋಡಿರುವುದಿಲ್ಲ. ಆರೋಪಿ 19 ಲಕ್ಷ ವ್ಯಯಕ್ತಿಕ ಸಾಲ ಹಾಗೂ ಸುಮಾರು 8 ಲಕ್ಷ ಚಿನ್ನದ ಸಾಲ ಪಡೆದುಕೊಂಡು ಮನೆ ಕಟ್ಟಿರುತ್ತಾರೆಂದರೆ ಸಾಕ್ಷಿ ನಮ್ಮ ಬಳಿ ಸಾಲವನ್ನು ತೆಗೆದುಕೊಂಡಿರುತ್ತಾರೆಂದು ನುಡಿದಿರುತ್ತಾರೆ. ಆರೋಪಿ 25 ಲಕ್ಷ ರೂಪಾಯಿ ಹಣವನ್ನು ವ್ಯಯಕ್ತಿಕ ಸಾಲ ಪಡೆದುಕೊಂಡಿದ್ದು ನಮ್ಮ ಬಳಿ ಸಾಲ ಪಡೆದುಕೊಳ್ಳುವ ಪ್ರಮೇಯವೇ ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಅಣ್ಣ ರೂ.2,75,000/- ಪಡೆದುಕೊಳ್ಳುವ ಸಲುವಾಗಿ ಯಾವುದೇ ದಾವೆ ಹೂಡಿರುವುದಿಲ್ಲ.

13. ಆರೋಪಿಗೆ ಸೇರಿದ ಸರ್ವೆ ನಂಬರ್-25/4 ರ 20 ಗುಂಟೆ ಜಮೀನನ್ನು ನನ್ನ ಗಂಡ ಮತ್ತು ಬಾವನಿಗೆ ಮಾರಾಟ ಮಾಡಿಲ್ಲದಿದ್ದ ಕಾರಣದಿಂದ ಆರೋಪಿಯ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ನನ್ನ ಗಂಡ ನನ್ನ ಕಡೆಯಿಂದ ಈ ವಿವಾದಿತ ಚೆಕ್ಕನ್ನು ಅಮಾನ್ಯಗೊಳಿಸಿ ಈ ದೂರು ದಾಖಲಿಸಿರುತ್ತಾರೆಂದರೆ ಸರಿಯಲ್ಲ. ನನ್ನ ಗಂಡ ಮತ್ತು ನನ್ನ ಬಾವ

ಸಿ.ಸಿ. ಸಂಖ್ಯೆ : 6074/2025
ಪಿ.ಡಬ್ಲ್ಯೂ : 01

5 ಲಕ್ಷ ರೂಪಾಯಿಯನ್ನು ಮುತ್ತುರಾಜು ರವರ ಮೂಲಕ ಆರೋಪಿಗೆ ನೀಡಿದ್ದರೇ ವಿನಃ ನನ್ನ ಕಡೆಯಿಂದ ಯಾವುದೇ ಹಣವನ್ನು ನಾನು ಆರೋಪಿಗೆ ನೀಡಿಲ್ಲ ಎಂದರೆ ಸರಿಯಲ್ಲ. ನಾನಗಲೀ, ನನ್ನ ಗಂಡನಾಗಲೀ ಹಾಗೂ ನನ್ನ ಬಾವನಾಗಲೀ ಆರೋಪಿಗೆ ಹಣವನ್ನು ಯಾವತ್ತೂ ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ನನ್ನ ಬಾವ ಪೊಲೀಸ್ ಇಲಾಖೆಯಲ್ಲಿರುವ ಕಾರಣದಿಂದ ಅವರು ಮುತ್ತುರಾಜು ರವರ ಮೂಲಕ ಹಣದ ವ್ಯವಹಾರ ನಡೆಸಿದ್ದರು ಹಾಗೂ ಅವರಿಂದ 5 ಲಕ್ಷ ರೂಪಾಯಿ ಹಣವನ್ನು ಆರೋಪಿಗೆ ಕೊಟ್ಟಿರುತ್ತಾರೆಂದರೆ ಸಾಕ್ಷಿ ನಾವು ಹಣ ಕೊಟ್ಟಿರುವುದು ಗೊತ್ತು, ಅವರು ಕೊಟ್ಟಿರುವುದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ವಿವಾದಿತ ಚೆಕ್ಕು ಹಾಗೂ ಮತ್ತೊಂದು ಚೆಕ್ಕನ್ನು ನಾರಾಯಣಪ್ಪನವರ ಮಗ ಮುತ್ತುರಾಜು ರವರಿಗೆ ಆರೋಪಿ ನೀಡಿದ್ದರೇ ವಿನಃ ನನಾಗಲೀ, ನನ್ನ ಗಂಡನಿಗೆಯಾಗಲೀ ವಿವಾದಿತ ಚೆಕ್ಕನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆ ರೀತಿ ಪಡೆದಂತಹ ಚೆಕ್ಕುಗಳನ್ನು ನಾನು 7,50,000/- ನಮೂದಿಸಿ ಈ ದೂರನ್ನು ದಾಖಲಿಸಿದ್ದು, ಮುತ್ತುರಾಜು ಎಂಬುವರು 6,50,000/- ನಮೂದಿಸಿ ಅವರು ಆರೋಪಿಯ ವಿರುದ್ಧ ಮತ್ತೊಂದು ಪಿರ್ಯಾದಿ ದಾಖಲಿಸಿರುತ್ತಾರೆಂದರೆ ಸರಿಯಲ್ಲ. ಸುಮಾರು 14 ಲಕ್ಷಗಳನ್ನು ನಾವೇ ಚೆಕ್ಕುಗಳಲ್ಲಿ ನಮೂದಿಸಿಕೊಂಡು ಈ ಸುಳ್ಳು ಪ್ರಕರಣಗಳನ್ನು ದಾಖಲಿಸಿರುತ್ತೇವೆಂದರೆ ಸರಿಯಲ್ಲ. ನಾನು ನನ್ನ ದೂರಿನಲ್ಲಿ ಹಾಗೂ ನನ್ನ ಸಾಕ್ಷ್ಯ ಪ್ರಮಾಣಪತ್ರಿಕೆಗಳಲ್ಲಿ ಸುಳ್ಳು ಅಂಶಗಳನ್ನು ನಮೂದಿಸಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು )

ಓ. ಹೇ. ಕೇ. ಸ. ಎಂ. ಒ. ನನ್ನ ಸಮಕ್ಷಮ,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಮಾಗಡಿ.